ಕಾಯುತ್ತಿದ್ದಾಳೆ ಎಂದಲ್ಲ. ಅವಳು ಯಾರಿಗಾಗಿಯೂ ಕಾಯುವುದಿಲ್ಲ; ವಾಸ್ತವವೆಂದರೆ ಅವಳು ಊರಲ್ಲೇ ಇಲ್ಲ. ಹೌದು, ಮಾರನೇ ವರ್ಷವೇ ಅವಳ ಕುಟುಂಬ ಯಾರಿಗೂ ಹೇಳದೆ ಬಂದ ಹಾಗೆಯೇ ಹೊರಟು ಹೋಯಿತು. ಎಲ್ಲಿಗೆ, ಯಾಕೆ ಎಂದು ಗೊತ್ತಾಗಲಿಲ್ಲ. ಬುಕೆ ಘಟನೆಯ ನಂತರ ನಾನು ಅದೆಷ್ಟು ಕುಗ್ಗಿಹೋಗಿದ್ದೆನೆಂದರೆ ನಾನು ಯಾರ ಮುಖವನ್ನೂ ನೋಡುವುದಕ್ಕೆ ಬಯಸುತ್ತಿರಲಿಲ್ಲ. ಎಷ್ಟೋ ಸಲ ಏಂಜೆಲಳನ್ನು ಕಂಡು ಕ್ಷಮೆ ಕೇಳಬಯಸಿದ್ದೆ. ಆದರೆ, ಅವಳಿಗೂ ಈ ಘಟನೆಯಿಂದ ಸಾಕಷ್ಟು ಅವಮಾನವಾಗಿತ್ತು. ಯಾವ ರೀತಿ ಪ್ರತಿಕ್ರಿಯಿಸುತ್ತಾಳೋ ಎಂದು ತಿಳಿಯದೆ ಗೊಂದಲದಲ್ಲಿ ಸಿಲುಕಿದ್ದೆ. ಅದು ನಡೆದ ನಂತರ ಮೂರು ದಿವಸ ಅವಳು ಕಾಲೇಜಿಗೆ ಬಂದಿರಲಿಲ್ಲ. ಅವಳಿಗೆ ಅಲರ್ಜಿ ಜ್ವರ ಬಂದಿತ್ತೆಂದು ಕೇಳಿದ್ದೆ. ನಂತರ ದಿನಗಳು ಹೀಗೆ ಸಾಗತೊಡಗಿದವು. ಮರು ವರ್ಷ ಅವಳು ಕಾಲೇಜಿನಲ್ಲಿ ಕಾಣಿಸದಿದ್ದಾಗಲೇ ನನಗೆ ಗೊತ್ತಾದುದು ಅವಳು ಬೇರೆ ಊರಿಗೆ ಹೋಗಿದ್ದಾಳೆ ಎಂದು. ಅವಳು ಹೋದುದರಿಂದ ನಮ್ಮೂರಿನ ಕಳೆಯೇ ಹೊರಟುಹೋದಂತೆ ನನಗನಿಸಿತು; ಆದರೂ ಇನ್ನೊಂದು ದೃಷ್ಟಿಯಲ್ಲಿ ನನಗೆ ಸ್ವಲ್ಪ ಹಗುರ ಅನ್ನಿಸಿತು ಕೂಡ. ಹಾಗೆ ಅನ್ನಿಸಬಾರದಿತ್ತು; ಆದರೆ, ಅನ್ನಿಸಿದ್ದು ಮಾತ್ರ ನಿಜ.

ನಂತರ ನಾನು ಯಾವ ಹುಡುಗಿಯನ್ನೂ ಪ್ರೀತಿಸುವುದಕ್ಕೆ ಹೋಗಲಿಲ್ಲ.

ಡಿಗ್ರಿ ಮುಗಿಸಿದ ನಾನು ಮುಂದೆ ಶಿಕ್ಷಣ ಮುಂದುವರಿಸುವ ಆರ್ಥಿಕ ಸ್ಥಿತಿಯಲ್ಲಿ ಇರದಿದ್ದ ಕಾರಣ ಏನಾದರೂ ಕೆಲಸ ಹಿಡಿಯಲೇ ಬೇಕಾಗಿತ್ತು. ನಾನು ಮಾಡದ ಕೆಲಸಗಳಿರಲಿಲ್ಲ. ಆದರೂ ಈ ಸಾಹಿತ್ಯದ ಹುಚ್ಚು ಒಮ್ಮೆ ಹಿಡಿದರೆ ನಂತರ ಮನುಷ್ಯ ಬಹುಶಃ ಇನ್ನು ಯಾತಕ್ಕೂ ನಾಲಾಯಖ್ ಎನಿಸುತ್ತಾನೆಂದು ಕಾಣುತ್ತದೆ: ಕೆಲಸದ ಮಧ್ಯೆ ಥಟ್ಟಂತ ಅನ್ಯಮನಸ್ಕನಾಗಿಬಿಡುತ್ತಿದ್ದೆ. ಇರಲಿ. ಈಗ ಅದೆಲ್ಲ ಹೇಳಿ ಏನು ಉಪಯೋಗ? ಅಂತೂ ಕೊನೆಗೆ, ನಾನು ಮತ್ತು ನನ್ನ ತಮ್ಮ ಸೇರಿಕೊಂಡು ಊರಿನಲ್ಲಿ ಒಂದು 'ಇಂಗ್ಲಿಷ್ ಕೋಚಿಂಗ್ ಸೆಂಟರ್' ತೆರೆದೆವು. ಅಂದಿನಿಂದ ನಮ್ಮ ಹೊಟ್ಟೆ ಅದರಿಂದ ಹೊರೆಯುತ್ತಿದೆ. ಸುಮ್ಮನೆ ಹೇಳಿದೆ. ಅದು ಗೊತ್ತಿರುವವರಿಗೆ ಇದೂ ಗೊತ್ತಿರಲಿ ಎಂದು. ಯಾಕೆಂದರೆ ಮಾರಾಟವಾಗುವ ಪುಸ್ತಕಗಳನ್ನೇನೂ ನಾನು ಬರೆಯುತ್ತಿಲ್ಲವಷ್ಟೆ.

**'ವಾರವಾರವೂ ಪುಸ್ತಕ ಬಿಡುಗಡೆ ಸಮಾರಂಭಗಳು ನಡೀತವೆ; ಈಗ ಅವಕ್ಕೆ ಲೋಕಾರ್ಪಣೆ ಎಂದು ಕರೆಯುತ್ತಾರೆ. ಇವುಗಳ ಆಮಂತ್ರಣ ಪತ್ರಿಕೆಗಳನ್ನು ನೋಡಿದರೇ ನಾವು ಮೂರ್ಛೆಹೋಗಬೇಕು. ಅಷ್ಟೊಂದು ಘನವಂತರ ಹೆಸರುಗಳಿರುತ್ತವೆ...''**

3

ನಾನು ಊರಿಗೆ ಮರಳಿದ್ದು ನನ್ನ ವಿದ್ಯಾರ್ಥಿಗಳಿಗೆ ಅವರ್ಣನೀಯ ಸಂತೋಷ ತಂದಿದೆ. ಅವರು ನನ್ನ ಸುತ್ತ ಕುಣಿದಾಡುತ್ತಿದ್ದಾರೆ. ಇದು ಸಹಜ. ನಾನಾದರೂ ಹಾಗೆ ಮಾಡುವವನೇ. ಉದಾಹರಣೆಗೆ, ಏಂಜೆಲೋ ಮರಳಿ ಬಂದರೆ. ಆದರೆ, ಏಂಜೆಲೋ ಮರಳಿ ಬರುವುದಿಲ್ಲ. ನಾನು